ದೇವಸ್ಥಾನದ ಹೆಸರು	ಗುತ್ತಿಗೆದಾರರ ಹೆಸರು	ತಿಂಗಳ ಬಾಡಿಗೆ	ವರ್ಷದ ಬಾಡಿಗೆ
	೨೨) ಅಂಜನಮ್ಮ	೬.೦೦	೭೨.೦೦
	೨೩) ಮುತ್ತುಸ್ವಾಮಿ	೩೪.೦೦	೪೦೮.೦೦
	೨೪) ಹಮೀದ್	೫೦.೦೦	೬೦೦.೦೦
	೨೫) ಡಾ. ನೀಲಾ	೫೦.೦೦	೬೦೦.೦೦
	೨೬) ವಾಸುದೇವರಾವ್	೨೫.೦೦	೩೦೦.೦೦
	೨೭) ಸಂಜೀವಪ್ಪ	೮.೦೦	೯೬.೦೦
	೨೮) ಲಕ್ಷ್ಮೀ ನಾರಾಯಣಪ್ಪ	೭.೦೦	೮೪.೦೦
	೨೯) ಶ್ರೀ ರೆಗೋ	೫.೦೦	೬೦.೦೦
	೩೦) ಬಾಬುಸಿಂಗ್	೫.೭೫	೬೯.೦೦
	೩೧) ಹುಚ್ಚಪ್ಪ	೩.೦೦	೩೬.೦೦
	೩೨) ರಾಮಮೂರ್ತಿ	೫.೦೦	೬೦.೦೦
	೩೩) ರಾಜಗೋಪಾಲ್	೮.೦೦	೯೬.೦೦
		೧೩೬೩.೭೫	೧೬೩೫೯.೦೦
೪೦) ಕೋಡಿ ಆಂಜನೇಯ	೧) ಶ್ರೀ ರಾಮ ಕೋ.ಆಪರೇಟಿವ್ ಬ್ಯಾಂಕ್ ಲಿಮಿಟೆಡ್	೧೦೦.೦೦	೧೨೦೦.೦೦
೪೧) ಪ್ರಳಯಕಾಲದ ವೀರಭದ್ರ	೧) ಪ್ರಳಯಕಾಲದ ವೀರ ಭದ್ರಸ್ವಾಮಿ	೧೦೮.೦೦	೧೨೯೬.೦೦
		೧೦೮.೦೦	೧೦೮.೦೦
	ಒಟ್ಟು ಮೊತ್ತ ರೂ.	೭೬೫೪೨.೭೧	೯೧೮೫೧೨.೫೭

ಬೆಂಗಳೂರು ನಗರದಲ್ಲಿರುವ ಮುಜರಾಯಿ ಇಲಾಖೆಯಿಂದ ನಡೆಸಲ್ಪಡುತ್ತಿರುವ ಛತ್ರಗಳು

೧೩೦೫(೧೮೨೧)ಶ್ರೀ ಪೆರಿಕಲ್ ಎಂ. ಮಲ್ಲಪ್ಪ(ಚಿಕ್ಕಪೇಟೆ):- ಮಾನ್ಯ ಧಾರ್ಮಿಕ ದತ್ತಿ ರಾಜ್ಯ ಸಚಿವರು ದಯವಿಟ್ಟು ಈ ವಿಷಯಗಳನ್ನು ತಿಸುವರೇ?

ಅ) ಬೆಂಗಳೂರು ಮುಜರಾಯಿ ಇಲಾಖೆಯಿಂದ ನಡೆಸಲ್ಪಡುತ್ತಿರುವ ಛತ್ರಗಳ ಸಂಖ್ಯೆ ಎಷ್ಟು?

ಆ) ಖಾಸಗಿ ಟ್ರಸ್ಟ್ ಆಥವಾ ಖಾಸಗೀ ಜನರಿಂದ ನಡೆಸಲ್ಪಡುತ್ತಿರುವ ಛತ್ರಗಳ ಸಂಖ್ಯೆ ಎಷ್ಟು?

ಇ) ಖಾಸಗಿ ಸಮಿತಿ ಅಥವಾ ಖಾಸಗಿ ಜನರಿಂದ ನಡೆಸಲ್ಪಡುತ್ತಿರುವ ಛತ್ರಗಳಲ್ಲಿ ಮದುವೆಗಳಿಗೆ ವಿಧಿಸುವ ಶುಲ್ಕದ ಬಗ್ಗೆ ಷರತ್ತುಗಳೇನಾದರೂ ಇವೆಯೇ?

ಈ) ಪ್ರತಿಯೊಂದು ಮದುವೆಗೆ ಛತ್ರವನ್ನು ಕೊಡುವುದರಿಂದ ಸರ್ಕಾರಕ್ಕೆ ಆದಾಯವೇನಾದರೂ ಇದೆಯೇ?

ಶ್ರೀ ರಾಜಾ ಅಮರೇಶ ನಾಯಕ್ (ಧಾರ್ಮಿಕ ದತ್ತಿ ರಾಜ್ಯ ಸಚಿವರು):-

ಅ) ೭ ಛತ್ರಗಳು

ಆ) ಖಾಸಗಿ ಛತ್ರಗಳು ಈ ಇಲಾಖೆಯ ನಿಯಂತ್ರಣಕ್ಕೆ ಬರುವುದಿಲ್ಲ. ಆದರಿಂದಾಗಿ ಅವುಗಳ ಮಾಹಿತಿ ಇಲಾಖೆಯಲ್ಲಿ ಲಭ್ಯ ಇರುವುದಿಲ್ಲ

ಇ) ಪ್ರಶ್ನೆ ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅರಣ್ಯ ಇಲಾಖೆಯವರು ವಶಪಡಿಸಿಕೊಂಡಿರುವ ಗಂಧದ ಮರಗಳು.

೧೩೦೬(೧೪೨೨)ಶ್ರೀ ಬಿ. ಎಂ. ಇದಿನಬ್ಬ (ಉಳ್ಳಾಲ):- ಮಾನ್ಯ ರಾಜ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ೧೯೯೦-೯೧ ಮತ್ತು ೯೧-೯೨ನೇ ಡಿಸೆಂಬರ್ ಅಖೈರುವರೆಗೆ ದಕ್ಷಿಣ ಕನ್ನಡದಲ್ಲಿ ಅರಣ್ಯ ಇಲಾಖೆಯವರು ವಶಪಡಿಸಿಕೊಂಡ ಕಳ್ಳ ಸಾಗಾಣಿಕೆಯ ಗಂಧ ಎಷ್ಟು? ಹಾಗೂ ಇದರ ಒಟ್ಟು ಬೆಲೆ ಎಷ್ಟು? (ತಾಲ್ಲೂಕುವಾರು ವಿವರ ನೀಡುವುದು).

ಆ) ಎಷ್ಟು ಪ್ರಕರಣಗಳು ಗಂಧ ಸಾಗಾಣಿಕೆಯಲ್ಲಿ ಈ ಅವಧಿಯಲ್ಲಿ ಆಗಿದೆ? ಎಷ್ಟು ಜನರಿಗೆ ಶಿಕ್ಷೆ ಹಾಗೂ ದಂಡ ವಿಧಿಸಲಾಗಿದೆ?

ಶ್ರೀ ಈಟಿ ಶಂಭುನಾಥ್ (ರಾಜ್ಯ ಅರಣ್ಯ ಸಚಿವರು):-

ಅ) ೧೯೯೦-೯೧ ಮತ್ತು ೧೯೯೧-೯೨ (ಡಿಸಂಬರ್ ೯೧ರ ಅಂತ್ಯದವರೆಗೆ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಶಪಡಿಸಿಕೊಂಡ ಶ್ರೀಗಂಧದ ಪ್ರಮಾಣ ಮತ್ತು ಬಲೆ ಈ ರೀತಿ ಇದೆ.

	೧೯೯೦-೯೧		೧೯೯೧-೯೨ (ಡಿಸೆಂಬರ್ ೯೧ರವರೆಗೆ)	
ತಾಲ್ಲೂಕು	ಶ್ರೀಗಂಧ ಪ್ರಮಾಣ	ಬೆಲೆ ರೂ. ಲಕ್ಷಗಳಲ್ಲಿ	ಶ್ರೀಗಂಧ ಪ್ರಮಾಣ	ಬೆಲೆ ರೂ. ಲಕ್ಷಗಳಲ್ಲಿ
೧) ಮಂಗಳೂರು	೨.೦೦೦	೩.೦೦	-	-
೨) ಪುತ್ತೂರು	೫.೦೦೦	೭.೫೦	೦.೩	೦.೪೫
೩) ಸುಳ್ಯ	೭.೦೦೦	೧೦.೫೦	-	-
೪) ಬೆಳ್ತಂಗಡಿ	೩.೦೦೦	೪.೫೦	೦.೭೦೦	೧.೦೫
೫) ಕಾರ್ಕಳ	೩.೦೦೦	೪.೫೦	೪.೦೦೦	೬.೦೦೦
೬) ಕುಂದಾಪುರ	೧.೦೦೦	೧.೫೦	೦.೬೦೦	೦.೯೦
೭) ಉಡುಪಿ	೦.೬೦೦	೦.೯೦	೨.೬೦೦	೩.೯೦